<u>ದಿನಾಂಕ **22.02.2025** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ **1** ರಿಂದ **8** ನೇ ಪ್ರತಿವಾದಿಯವರ ಪರ ಶ್ರೀ ಹೆಚ್ ಎಸ್ ಹೆಚ್ ವಕೀಲರಿಂದಃ</u>

ನಾನು ಪಿಯುಸಿಯವರೆಗೆ ಓದಿರುತ್ತೇನೆ. ನನಗೆ ಕನ್ನಡ ಬರುತ್ತದೆ. ಆಂಗ್ಲ ಭಾಷೆ ಬರುವುದಿಲ್ಲ. ನಾನು ಬಿ ಟಿ ಎಸ್ ?ಕಂಡಕ್ಟರ್ ಆಗಿ ನಿವೃತ್ತಿಯಾಗಿರುತ್ತೇನೆ. ನನ್ನ ತಂದೆಗೆ 6 ಜನ ಮಕ್ಕಳು. ನನ್ನ ತಾತನಿಗೆ 3 ಜನ ಗಂಡು ಮಕ್ಕಳು. ನನ್ನ ತಾತನಿಗೆ 4 ಜನ ಹೆಣ್ಣು ಮಕ್ಕಳು. ದಾವಾ ವಿಷಯ ಗೊತ್ತಿದೆ. ನನ್ನ ತಾತನಿಗೆ ಎಷ್ಟು ಆಸ್ತಿ ಇತ್ತು ಎಂದು ನನಗೆ ಗೊತ್ತಿಲ್ಲ ನನ್ನ ತಂದೆಗೆ ಗೊತ್ತು. ನನ್ನ ತಾತನಿಗೆ ಸೇರಿದ ಆಸ್ತಿಯ ದಾಖಲೆಗಳನ್ನು ನ್ಯಾಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ತಾತನ ಆಸ್ತಿಗಳನ್ನು ತಿಳಿದುಕೊಂಡಿರುತ್ತೇನೆ. ನನ್ನ ತಾತ ನಾನು ಚಿಕ್ಕ ಹುಡುಗನಾಗಿದ್ದಾಲೇ ತೀರಿಕೊಂಡಿರುತ್ತಾರೆ. ನನ್ನ ತಂದೆ ಸಹೋದರರು ವಿಭಾಗ ಮಾಡಿಕೊಂಡಿರುವ ಬಗ್ಗೆ ದಾಖಲೆ ಇಲ್ಲ. ನಿಪಿ-29 ರಲ್ಲಿ ನನ್ನ ತಾತ ಮತ್ತು ನನ್ನ ಅಜ್ಜಿಯ ಹೆಸರನ್ನು ನಮೂದು ಮಾಡಿಲ್ಲ ಎಂದರೆ ನಿಜ. ಪಹಣಿಗಳು ನನ್ನ ತಂದೆಯ ಹೆಸರಿನಲ್ಲಿದೆ. ಈಗ ದಾವಾ ಆಸ್ತಿಗಳು ನನ್ನ ಅಣ್ಣನ ಹೆಸರಿನಲ್ಲಿವೆ. ಈ ಆಸ್ತಿಗಳು 1987-1988 ರಲ್ಲಿ ಬದಲಾವಣೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಣ್ಣನ ಹೆಸರಿಗೆ ಆಸ್ತಿಗಳು ಬದಲಾವಣೆಯಾದ ಬಗ್ಗೆ ಪ್ರಶ್ನೆ ಮಾಡಿಲ್ಲ. 1987-1988 ರಲ್ಲಿ ನನ್ನ ಅಣ್ಣ ಮತ್ತು ಆತನ ಸಹೋದರರ ಹೆಸರಿನಲ್ಲಿ ಆಸ್ತಿಯ ದಾಖಲೆಗಳು ಹೋಗುತ್ತಿವೆ ಎಂದರೆ ಸಾಕ್ಷಿಯು ನನ್ನ ಅಣ್ಣ ರಾಮಚಂದ್ರ ರವರ ಹೆಸರಿನಲ್ಲಿ ಹೋಗುತ್ತಿವೆ ಎಂದು ನುಡಿಯುತ್ತಾರೆ. 8 ನೇ ಪ್ರತಿವಾದಿಯ ಹೆಸರಿನಲಿರುವ ಆಸ್ತಿಗಳು ಅವರೇ ಖರೀದಿ ಮಾಡಿರುತ್ತಾರೆಂದರೆ ಸುಳ್ಳು. ನಾನು ನನ್ನ ಪಾಲಿನ ಆಸ್ತಿಗಳಿಗೆ 1 ನೇ ಪ್ರತಿವಾದಿಯಾದ ನನ್ನ ಅಣ್ಣನಿಂದ ಹಣ ಪಡೆದು ಬೆಂಗಳೂರು ಸೇರಿದ್ದೇನೆಂದರೆ ಸುಳ್ಳು. ನನ್ನ ಹೆಸರಿನಲ್ಲಿ ಬೆಂಗಳೂರಿನಲ್ಲಿ ಸೈಟು ಮತ್ತು ಮನೆ ಪಡೆಯಲು ನಾನು 1 ನೇ ಪ್ರತಿವಾದಿಯಾದ

ನನ್ನ ಅಣ್ಣನಿಂದ ಹಣ ಪಡೆದಿದ್ದೇನೆಂದರೆ ಸುಳ್ಳು. ಚನ್ನಪಟ್ಟಣದಲ್ಲಿ ನನಗೆ ಒಂದು ನಿವೇಶನ ಮತ್ತು ಮನೆ ಇದೆ ಎಂದರೆ ಸುಳ್ಳು. ಈ ಆಸ್ತಿಗಳನ್ನು ಖರೀದಿ ಮಾಡಲು 1 ನೇ ಪ್ರತಿವಾದಿಯಾದ ನನ್ನ ಅಣ್ಣನಿಂದ ನನ್ನ ಪಾಲಿನ ಹಣವನ್ನು ಪಡೆದಿರುತ್ತೇನೆಂದರೆ ಸುಳ್ಳು. ನಾನು ಬೆಂಗಳೂರಿನಲ್ಲಿ ಉದ್ಯೋಗಕ್ಕೆ ಸೇರಿದ ನಂತರ ಊರಿಗೆ ಬಂದಿಲ್ಲ ಎಂದರೆ ಸುಳ್ಳು. ಬೆಂಗಳೂರು ಮತ್ತು ಚನ್ನಪಟ್ಟಣದ ಆಸ್ತಿಗಳನ್ನು ಈ ದಾವಾದಲ್ಲಿ ಸೇರಿಸಲು ತೊಂದರೆ ಇಲ್ಲ. ಬೆಂಗಳೂರಿನಲ್ಲಿರುವ ಮನೆಯನ್ನು ನಾನು ಕೆಲಸಕ್ಕೆ ಸೇರುವ ಮೊದಲು 1 ನೇ ಪ್ರತಿವಾದಿಯವರು ನನಗೆ ತೆಗೆಯಿಸಿಕೊಟ್ಟಿದ್ದರು ಎಂದರೆ ಸುಳ್ಳು.

ಸಮಯಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**